# ‘ಆದರಿದು ಬದುಕಿದೆ, ಬಿಡಲೊಲ್ಲೆ’

**ವೈಶಂಪಾಯನ:** ‘ಕುಂತಿಯ ಮಗನೇ’, ಭೂಮಿ, ಸ್ವರ್ಗ, ಆಕಾಶ ಎಲ್ಲವೂ ದನಿ ಮಾಡಿದ ಹಾಗೆ ತೇರನ್ನು ಹತ್ತಿರ ತಂದು ಇಂದ್ರ ಕರೆದ.

ತಮ್ಮಂದಿರು, ಜೊತೆಗೆ ದ್ರೌಪದಿ ಬಿದ್ದಿದ್ದನ್ನು ಕಂಡು ಕಡುದುಃಖದಲ್ಲಿ ಬೆಂದಿದ್ದ ಯುಧಿಷ್ಠಿರ ಆ ನೂರು ಕಣ್ಣಿನವನಿಗೆ ಹೀಗೆಂದ

**ಯುಧಿಷ್ಠಿರ:** ಜೊತೆಗೇ ಬಂದು ಬಿದ್ದು ಹೋದ ನನ್ನ ತಮ್ಮಂದಿರೂ ನನ್ನ ಜತೆ ಬರಲಿ. ಅವರಿಲ್ಲದಿರುವ ಸ್ವರ್ಗ ನನಗೆ ಬೇಡ. ಆ ರಾಜಪುತ್ರಿಸುಕುಮಾರಿ, ಸುಖವಾಗಿರಬೇಕಾದವಳು ಅವಳು, ಅವಳೂ ಬರಬೇಕು. ಇದಕ್ಕೆ ಒಪ್ಪಿಕೋ ಪುರಂದರ.

**ಇಂದ್ರ:** ನಿನಗಿಂತ ಮುಂಚೆ ಅವರು ಸ್ವರ್ಗ ತಲುಪಿದಾರೆ. ಕೃಷ್ಣ ಸಮೇತ ನೀನವರನ್ನು ಸ್ವರ್ಗದಲ್ಲಿ ಕಾಣುತ್ತೀಯಂತೆ. ಅವರೆಲ್ಲಾ ಮನುಷ್ಯ ಶರೀರ ತೊರೆದು ಅಲ್ಲಿಗೆ ಹೋಗಿದಾರೆ. ನೀನು ಮಯ್ಯಿ ಸಮೇತ ಬರತಿದೀಯಾ. ಯೋಚಿಸಬೇಡ.

**ಯುಧಿಷ್ಠಿರ:** ನೀನು ಜೀವಿಗಳೆಲ್ಲದರ ಒಡೆಯ. ಈ ನಾಯಿ ನನಗೇ ಅಂಟಿಕೊಂಡು ನಿತ್ಯ ಬರುತಾ ಇದೆ. ನನ್ನ ಜತೆ ಇದೂ ಬರಲಿ. ಇಲ್ಲದಿದ್ದರೆ ಕಟುಕತನವಾಗುತ್ತದೆ. ಬಿಟ್ಟು ಬರಲು ನನ್ನ ಮನಸ್ಸು ಒಪ್ಪುವುದಿಲ್ಲ.

**ಇಂದ್ರ:** ನಿನಗೀಗ ಅಮರತ್ವ ಸಿಕ್ಕಿದೆ. ನನ್ನ ಸರಿಸಾಟಿ ಸಂಪತ್ತು ಪಡೆದಿದೀಯ. ದೊಡ್ಡ ದೊಡ್ಡ ಸಿದ್ಧಿ ವಶವಾಗಿದೆ. ಈಗ ಸ್ವರ್ಗದ ಸಮಸ್ತ ಸುಖವೂ ಸಿಗುತ್ತಾ ಇದೆ. ಈ ನಾಯಿಯನ್ನ ತೊರೆ ಅದರಲ್ಲಿ ಕಟುಕತನ ಏನು ಬಂತು?

**ಯುಧಿಷ್ಠಿರ:** ನೂರು ಕಣ್ಣವನೆ, ಉತ್ತಮನಾದವನು ಅಧಮ ಕೆಲಸ ಮಾಡುವುದಕ್ಕುಂಟಾ?

ನಚ್ಚಿದವರನ್ನು ಕೈ ಬಿಡಬೇಕು ಎನ್ನುವುದಾದರೆ ನನಗೆ ಆ ಕೂಟವೇ ಬೇಡ.

**ಇಂದ್ರ:** ನಾಯಿವಂತನಿಗೆ ಸ್ವರ್ಗದಲ್ಲಿ ಜಾಗ ಇಲ್ಲ. ಯಜ್ಞದ ಫಲವೆಲ್ಲ ನಾಶವಾಗಿಬಿಡುತ್ತದೆ. ನಾಯಿಯನ್ನು ತೊರೆ. ಅದೇನು ಕಟುಕತನ ಅಲ್ಲ ಯೋಚನೆ ಮಾಡಿ ನೋಡು.

**ಯುಧಿಷ್ಠಿರ:** ನಚ್ಚಿದವರನ್ನು ಕೈಬಿಡುವುದು ಪಾಪ. ಬ್ರಹ್ಮಹತ್ಯಕ್ಕೆ ಸಮ ಅದು ಮಹೇಂದ್ರ, ಸ್ವಂತ ಸುಖಕ್ಕೋಸ್ಕರ ಈ ನಾಯಿನ್ನು ಬಿಡಲಾರೆ. ಹೆದರಿ ಬಂದವನನ್ನು, ಗತಿ ಇಲ್ಲದವನನ್ನು, ಆಸರೆ ಕೇಳಿದವರನ್ನು ಕ್ಷೀಣವಾದವರನ್ನು, ಪ್ರಾಣರಕ್ಷೆ ಕೇಳಿದವರನ್ನು ನನ್ನ ಬಳಿ ಬಂದ ಮೇಲೆ ನನ್ನ ಪ್ರಾಣ ಹೋದರೂ ಕೈ ಬಿಡಲ್ಲ. ಇದು ನನ್ನ ವ್ರತ.

**ಇಂದ್ರ:** ನೋಡು, ಸ್ವರ್ಗದಲ್ಲಿ ನಾಯಿ ಇದ್ದರೆ ಸ್ವರ್ಗಕ್ಕೆ ಬರುವ ಹವಿಸ್ಸನ್ನೆಲ್ಲ ರಾಕ್ಷಸರು ಕೆರಳಿ ಕಸಿದುಕೊಂಡು ಬಿಡುತಾರೆ. ಸ್ವರ್ಗಕ್ಕೆ ನಾಯಿ ಬರಬಾರದು. ಅದನ್ನ ತೊರೆ. ತಮ್ಮಂದಿರನ್ನು ತೊರೆದೆ, ಮಡದಿ ಕೃಷ್ಣೆನ ತೊರೆದೆ. ಹಾಗೆ ತೊರೆದದ್ದಕ್ಕೇ ಈ ಲೋಕ ಸಿಕ್ಕಿದ್ದು. ಈ ನಾಯಿಯನ್ನ ಯಾಕೆ ಬಿಡಲೊಲ್ಲೆ? ಎಲ್ಲ ತೊರೆದ ನಿನಗೆ ಈಗ್ಯಾಕೆ ಇಷ್ಟೊಂದು ಮೋಹ?

**ಯುಧಿಷ್ಠಿರ:** ಜೀವ ತೊರೆದವರ ಜತೆ ಹಗೆತನವೂ ಇಲ್ಲ ಮೋಹವೂ ಇಲ್ಲ. ಅವರನ್ನ ಬದುಕಿಸುವುದು ನನ್ನ ಕೈಲಿರಲಿಲ್ಲ, ಬಿಟ್ಟೆ. ಆದರೆ ಇದು ಬದುಕಿದೆ, ಬಿಡಲೊಲ್ಲೆ.

ಧರ್ಮರಾಜನ ಮಾತು ಕೇಳಿ ನಾಯಿಯ ರೂಪದಲ್ಲಿದ್ದ ಯಮಧರ್ಮರಾಯ ಅಕ್ಕರೆ ತುಂಬಿ ಯುಧಿಷ್ಠಿರನನ್ನು ಕೊಂಡಾಡುತ್ತ ಹೀಗೆಂದ

**ಯಮಧರ್ಮ:** ರಾಜಾ, ಬರೀ ಮನೆತನ ಬುದ್ಧಿ ಅಪ್ಪರಲ್ಲೇ ಅಲ್ಲ, ಇಂಥ ಭೂತದಯೆಯಿಂದಾಗಿ ನೀನು ದೊಡ್ಡವನು ಮಗು, ಹಿಂದೊಂದು ಸಾರಿ, ದ್ವೈತವನದಲ್ಲಿ ನಿನ್ನ ತಮ್ಮದೀರು ನೀರಡಿಕೆಯಲ್ಲಿ ಸತ್ತಾಗ ನೀನು ಭೀಮಾರ್ಜುನರನ್ನು ಬದುಕಿಸಿಕೊಳ್ಳದೆ ‘ತಾಯಂದಿರು ಸಮವಾಗಲಿ ನಕುಲ ಬದುಕಲಿ’ ಎಂದೆ.

ಈಗ ನಾಯಿಗೆ ಜೀವವಿದೆ, ನಿನ್ನನ್ನು ನಚ್ಚಿಕೊಂಡಿದೆ ಎಂದು ನಾಯಿಗೋಸ್ಕರ ದೇವರಥವನ್ನೇ ತೊರೆದೆ! ನಿಜ, ಸ್ವರ್ಗದಲ್ಲು ನಿನ್ನ ಸಮ ಯಾರೂ ಇಲ್ಲ.

(ಮುಗಿಯಿತು)

ಪ್ರತಿಕ್ರಿಯಿಸಿ: feedback@sudha.co.in

